ಕರ್ನಾಟಕ ವಿಧಾನ ಸಭೆ

ಸೋಮವಾರ 15ನೇ ಮಾರ್ಚ್ 1993

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ.ಎಸ್. ಕೌಜಲಗಿ) ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ದೂಧ್‌ಗಂಗಾ ಯೋಜನೆಯನ್ನು ಪೂರ್ಣಗೊಳಿಸುವುದು

361 (2018): ಶ್ರೀ ಸುಭಾಷ್ ಜೋಶಿ (ನಿಪ್ಪಾಣಿ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ದೂಧ್‌ಗಂಗಾ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

2. ಈ ಯೋಜನೆಯಿಂದ ಕರ್ನಾಟಕಕ್ಕೆ ಎಷ್ಟು ನೀರು ಲಭ್ಯವಾಗುತ್ತದೆ;

3. ಈ ಯೋಜನೆಯಿಂದ ಚಿಕ್ಕೋಡಿ ತಾಲ್ಲೂಕಿನಲ್ಲಿ ಎಷ್ಟು ಪ್ರದೇಶ ನೀರಾವರಿ ಸೌಲಭ್ಯಕ್ಕೆ ಒಳಪಡುತ್ತದೆ;

4. ವೇದಗಂಗಾ ನದಿಗೆ ಈ ಯೋಜನೆಯಿಂದ ನೀರು ದೊರೆಯುತ್ತದೆಯೇ;

5. ಹಾಗಿದ್ದಲ್ಲಿ ಇದಕ್ಕೆ ಯಾವಾಗ ನೀರು ದೊರೆಯುತ್ತದೆ;

6. ಈ ಯೋಜನೆಗೆ ಕರ್ನಾಟಕದ ಪಾಲು ಎಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

1. ಈ ಯೋಜನೆಯ ಕರ್ನಾಟಕದ ಭಾಗವು 9ನೇ ಪಂಚವಾರ್ಷಿಕ ಅವಧಿಯಲ್ಲಿ ಪೂರ್ಣಗೊಳ್ಳುವ ಸಾಧ್ಯತೆಯಿದೆ.

2. 4000 ಟಿ.ಎಂ.ಸಿ.

3. 19,668 ಹೆಕ್ಟೇರುಗಳು

4. ಇಲ್ಲ

5. ಈ ಪ್ರಶ್ನೆ ಉದ್ಭವಿಸುವುದಿಲ್ಲ.

6. ಈ ಯೋಜನೆಯ ವೆಚ್ಚ ಮತ್ತು ಫಲಾನುಭವವನ್ನು ಹಂಚಿಕೊಳ್ಳುವ ಬಗ್ಗೆ ಒಪ್ಪಂದವನ್ನು ತೀರ್ಮಾನಿಸಲಾಗುತ್ತಿದೆ.

SRI SUBHASH S. JOSHI:– I have asked exact date of completion, it is not at all answered. Then, according to my knowledge the Maharastra

Government is going to change the plan. They have already changed the plan and the river Vedaganga will take water through Agmapur stream. Whether the Government knows about it. Whether the Government has any idea about the change of the plan. Is it not against the Inter-State water agreement?

ಶ್ರೀ ಎಸ್. ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೆ, ಈ ಯೋಜನೆ ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರದ ಜಂಟಿ ಯೋಜನೆಯಾಗಿದೆ. ಈ ಯೋಜನೆಯನ್ನು ಮಹಾರಾಷ್ಟ್ರ ಸರ್ಕಾರದವರು ಕಾರ್ಯರೂಪಕ್ಕೆ ತರತಕ್ಕಂಥಾದ್ದು, ಕರ್ನಾಟಕ ಸರ್ಕಾರ ಅವರಿಗೆ ಹಣವನ್ನು ಕೊಡತಕ್ಕಂಥಾದ್ದು. ಈಗಿನ ವರದಿಗಳ ಪ್ರಕಾರ 9ನೇ ಪಂಚವಾರ್ಷಿಕ ಯೋಜನೆ ಹೊತ್ತಿಗೆ ಕರ್ನಾಟಕದ ಚಿಕ್ಕೋಡಿ ತಾಲ್ಲೂಕಿನಲ್ಲಿ ಇದರಿಂದ ನೀರಾವರಿಯಾಗಬಹುದೆನ್ನತಕ್ಕಂಥ ಆಶಯವಿದೆ.

SRI SUBHAS S. JOSHI:– But, they have not answered, whether river Vedaganga will get water. They said 'No'. But, according to the plan, the river Vedaganga will also get water after the completion of the project which is already completed. Only because of the lack of canals, the Karnataka is not getting water. Karnataka is completing the canal portion. It has already started. Whether the Government wants to pressurise the Government of Maharashtra to dig canals?

ಶ್ರೀ ಎಸ್. ಎಂ. ಕೃಷ್ಣ:– ಕಾಲುವೆಗಳನ್ನು ಮಾಡಬೇಕೆಂದು ಈ ಬಗ್ಗೆ ನಾವು ಮಹಾರಾಷ್ಟ್ರ ಸರ್ಕಾರದ ಮೇಲೆ ಆಗಿಂದಾಗ್ಗೆ ಒತ್ತಾಯ ತರುತ್ತಿದ್ದೇವೆ. 1979ರ ಅಂದಾಜಿನ ಪ್ರಕಾರ ಈ ಯೋಜನೆಯ ಒಟ್ಟು ವೆಚ್ಚ 94.54 ಕೋಟಿ ರೂಪಾಯಿಗಳು. ಅದರಲ್ಲಿ ಕರ್ನಾಟಕದ ಪಾಲು ಸುಮಾರು 26 ಕೋಟಿ ರೂಪಾಯಿಗಳು. ಇದುವರೆಗೆ ನಾವು ಅವರಿಗೆ ಕೊಟ್ಟಿರತಕ್ಕಂಥ ಹಣ ಕೇವಲ 4 ಕೋಟಿ ರೂಪಾಯಿಗಳು.

ಮಾನ್ಯ ಸದಸ್ಯರು ಇದರಿಂದಲೇ ಅರ್ಥ ಮಾಡಿಕೊಳ್ಳಬಹುದು. ನಾವು ಈಗ 8ನೇ ಪಂಚವಾರ್ಷಿಕ ಯೋಜನೆಯ ಪ್ರಥಮ ವರ್ಷದಲ್ಲಿದ್ದೇವೆ. ನಮ್ಮ ಅಂದಾಜಿನ ಪ್ರಕಾರ ಕೆಲಸವಾಗುತ್ತಿರುವ ಗತಿಯನ್ನು ನೋಡಿದರೆ ಬಹುಶಃ 9ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ನೀರು ಸಿಕ್ಕಬಹುದು.

ಕೆಂಗೇರಿ – ಚಿಕ್ಕ ಬಾಣಾವರ ರೈಲ್ವೆಗೇಟಿನ ಬಳಿ ಮೇಲು ಸೇತುವೆ ನಿರ್ಮಾಣ

362 (2040): ಶ್ರೀ ಎಸ್. ರಮೇಶ್ (ಉತ್ತರಹಳ್ಳಿ):–

ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆಂಗೇರಿ - ಚಿಕ್ಕ ಬಾಣಾವರ ರೈಲ್ವೆ ಗೇಟಿನ ಬಳಿ ಸೇತುವೆ ಇಲ್ಲದ್ದು ಪಾದಚಾರಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಇಲ್ಲಿ ಓವರ್ ಬ್ರಿಡ್ಜ್ ನಿರ್ಮಾಣದ ಅಗತ್ಯವಿರುವುದು ನಿಜವಲ್ಲವೆ ?

ಇ) ಹಾಗಿದ್ದಲ್ಲಿ, ಸರ್ಕಾರದವರು ಕೂಡಲೇ ಈ ಬಗ್ಗೆ ಕ್ರಮ ಕೈಗೊಂಡು ಓವರ್ ಬ್ರಿಡ್ಜ್ ನಿರ್ಮಾಣವನ್ನು ಕೈಗೊಳ್ಳುವರೇ ?